**ಸಾಕ್ಷಿಗೆ ದಿನಾಂಕ 25.06.2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ. ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ ಹಾಗೂ ನನಗೆ ವ್ಯವಹಾರದ ಜ್ಞಾನ ಇರುತ್ತದೆ. ದಾಖಲೆಗಳಿಗೆ ಸಾಮಾನ್ಯವಾಗಿ ಸಹಿ ಮಾಡುವ ಮೊದಲು ಅವುಗಳಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡುತ್ತೇನೆ. ದೂರು, ನೋಟೀಸು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಮರೆತುಹೋಗಿರುತ್ತದೆ. ದೂರು, ನೋಟೀಸು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಮಾಹಿತಿಗಳನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ, ಅದಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ನಾನು ಆರೋಪಿಯ ಮನೆಯಲ್ಲಿ 9 ವರ್ಷಗಳಿಂದ ಭೋಗ್ಯಕ್ಕೆ ಇದ್ದಾಗಿನಿಂದ ಪರಿಚಯವಿರುತ್ತಾರೆ. ಆರೋಪಿಯ ಹೆಸರಿನಲ್ಲಿ ಯಾವುದೇ ಮನೆ ಅಥವಾ ಸೈಟು ಇರುವುದಿಲ್ಲ. ನನ್ನ ನೋಟೀಸ್, ದೂರು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಆರೋಪಿಯು ಮನೆಯನ್ನು ಹೊಂದಿರುತ್ತಾನೆ.

2015-2016ರ ಸುಮಾರಿಗೆ ಆರೋಪಿಯ ಮನೆಯನ್ನು ಭೋಗ್ಯಕ್ಕೆ ಪಡೆದು ವಾಸಿಸುತ್ತಿರುತ್ತೇನೆ. ಭೋಗ್ಯದ ವ್ಯವಹಾರದ ಮಾತುಕತೆಯನ್ನು ಆರೋಪಿ ತಂದೆಯ ಜೊತೆಗೆ ಆಗಿದ್ದು, ಆರೋಪಿ ಸಹ ಜೊತೆಯಲ್ಲಿದ್ದರು ಹಾಗೂ ನನ್ನ ಸ್ನೇಹಿತರು ಸಹ ಇದ್ದರು. ಭೋಗ್ಯದ ಮೊತ್ತ ರೂ. 2,70,000/-ಗಳಿಗೆ ಆಗಿರುತ್ತದೆ. 2015ರಲ್ಲಿ ಭೋಗ್ಯದ ಅವಧಿಯನ್ನು 3 ವರ್ಷಕ್ಕೆ ನಿಗದಿಪಡಿಸಲಾಗಿತ್ತು. ಆರೋಪಿಯ ತಂದೆಯಾದ ರಂಗನಾಥರವರ ಹೆಸರಿನಲ್ಲಿ ಭೋಗ್ಯಕ್ಕೆ ಪಡೆದ ಮನೆ ಇತ್ತು. ರೂ. 2,70,000/-ಗಳನ್ನು ಆರೋಪಿಯ ತಂದೆ ತಾಯಿಯರಿಗೆ ನೀಡಿರುತ್ತೇನೆ. ಭೋಗ್ಯದ ಕರಾರನ್ನು ವಕೀಲರಿಗೆ ನೀಡಿದ್ದು, ಅವಶ್ಯಕತೆ ಇದ್ದರೆ ಹಾಜರುಪಡಿಸುತ್ತೇನೆ. ಭೋಗ್ಯದ ಮೊತ್ತವನ್ನು ನಾನು ಆರೋಪಿಗೆ ನೀಡಿರುವುದಿಲ್ಲ. ಭೋಗ್ಯದ ಕರಾರು ಪತ್ರಕ್ಕೆ ಆರೋಪಿಯು ಸಾಕ್ಷಿಯಾಗಿ ಸಹಿ

ಮಾಡಿರುತ್ತಾರೆ. ಯಾವ ವರ್ಷದಲ್ಲಿ ಭೋಗ್ಯದ ಕರಾರನ್ನು ರಿನಿವಲ್ ಮಾಡಿಸಿರುತ್ತೇನೆ ಎಂದು ಹೇಳಲಾಗುವುದಿಲ್ಲ. ಎರಡು ಬಾರಿ ರಿನಿವಲ್ ಆಗಿದ್ದು, ದಾಖಲೆಗಳನ್ನು ಮುಂದೆ ಹಾಜರುಪಡಿಸುತ್ತೇನೆ. ಎರಡನೇ ಬಾರಿ ಭೋಗ್ಯದ ಕರಾರನ್ನು ಮಾಡಿಕೊಂಡಾಗ ಆರೋಪಿಯು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಕರಾರನ್ನು ಅವರ ತಂದೆ ತಾಯಿಯ ಜೊತೆ ಮಾಡಿಕೊಳ್ಳಲಾಗಿರುತ್ತದೆ. ಭೋಗ್ಯವನ್ನು ರಿನಿವಲ್ ಮಾಡಿಕೊಂಡಾಗ ಪುನಃ ಮೊತ್ತವನ್ನು ನೀಡಲಾಗಿರುವುದಿಲ್ಲ.

ಭೋಗ್ಯದ ಮೊತ್ತವನ್ನು 2015 ರಲ್ಲಿ ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ವಿಷಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ನನ್ನ ದೂರಿನಲ್ಲಿ ದಿಃ 27.09.2022 ರಲ್ಲಿ 2 ವರ್ಷಗಳ ಅವಧಿಗೆ ಭೋಗ್ಯದ ಕರಾರಾಗಿದ್ದು ಅದರ ಮೊತ್ತವು ರೂ. 2,70,000/-ಗಳನ್ನು ನೀಡಿರುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ 3 ವರ್ಷಕ್ಕೆ ಕರಾರು ಆಗಿರುತ್ತದೆ ಎಂದು ನುಡಿಯುತ್ತಾರೆ. ಭೋಗ್ಯದ ಅವಧಿಯನ್ನು ಪೂರ್ಣಗೊಳಿಸಿರುವುದಿಲ್ಲ ಕಾರಣ ಆರೋಪಿಯ ಕುಟುಂಬದವರು ಬ್ಯಾಂಕಿನಲ್ಲಿ ಸಾಲ ಮಾಡಿ ತುಂಬದ ಕಾರಣ ಬ್ಯಾಂಕಿನ ಅಧಿಕಾರಿಗಳು ಪೋಲೀಸರ ಜೊತೆ ಸೇರಿ ನಮ್ಮ ಬಾಡಿಗೆ ಮನೆಯನ್ನು ಖಾಲಿ ಮಾಡಿಸಿರುತ್ತಾರೆ ಆಗ ಸದರಿ ಪ್ರಕರಣದಲ್ಲಿರುವ ಚೆಕ್ಕನ್ನು ನನಗೆ ಕೊಡಿಸಿರುತ್ತಾರೆ. ಯಾವ ವರ್ಷದಲ್ಲಿ ಕಟ್ಟಡ ಮುಟ್ಟುಗೋಲು ಆಯಿತು ಎಂದು ನಿಖರವಾದ ದಿನಾಂಕ ನೆನಪಿಲ್ಲ. ಸುಮಾರು 2021-2022 ರಲ್ಲಿ ಆಗಿರಬಹುದು ಎಂದು ನುಡಿಯುತ್ತಾರೆ. ಬಾಡಿಗೆ ಮನೆಯಲ್ಲಿ ನಾವು ಮಾತ್ರ ವಾಸವಿದ್ದೆವು. ಆರೋಪಿಯ ಕುಟುಂಬದವರು ಬೇರೆ ಕಡೆ ವಾಸಿಸುತ್ತಿದ್ದರು. ಆರೋಪಿಯ ಕುಟುಂಬ ಬಸವ ಭವನದ ಮುಂಭಾಗದಲ್ಲಿ ವಾಸಿಸುತ್ತಿದ್ದು, ನಿಖರವಾದ ವಿಳಾಸ ಗೊತ್ತಿಲ್ಲ.

ದೂರಿನ ಶಿರೋನಾಮೆಯಲ್ಲಿ ಆರೋಪಿಯ ವಿಳಾಸ ಏನು ಬರೆದಿದೆ ಎಂದು ಹೇಳಲಾಗುವುದಿಲ್ಲ. ಆರೋಪಿಗೆ ಕಳುಹಿಸಲಾದ ನಿಪಿ-3 ನೋಟೀಸ್‌ನ್ನು ಯಾವ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ ಎಂದು ಗೊತ್ತಿಲ್ಲ. ನಿಪಿ-3 ಮತ್ತು 5 ರ ಮೇಲೆ ಇರುವ ವಿಳಾಸ

ಯಾರದೆಂದು ಗೊತ್ತಿಲ್ಲ. ಕಟ್ಟಡವನ್ನು ಮುಟ್ಟುಗೋಲು ಹಾಕಿದ ಸಮಯದಲ್ಲಿ ಆರೋಪಿಯ ವಿರುದ್ಧ ದೂರನ್ನು ನೀಡಲು ಹೋಗಿರುತ್ತೇನೆ ಹಾಗೂ ಆ ವೇಳೆ ರಾಜೀ ಪಂಚಾಯಿತಿ ನಡೆದಿರುತ್ತದೆ ಹಾಗೂ ಆಗ ಚೆಕ್ಕನ್ನು ನೀಡಿರುತ್ತಾರೆ. ಪೋಲೀಸ್ ಅಧಿಕಾರಿಗಳು ಚೆಕ್ಕನ್ನು ಕೊಡಿಸಿರುವುದಿಲ್ಲ, ಆರೋಪಿಯೇ ಅವರ ಮನೆಯ ಬಳಿ ನೀಡಿರುತ್ತಾರೆ. ನಿಪಿ-1 ಚೆಕ್ಕನ್ನು ಆರೋಪಿಯ ತಂದೆ ಆರೋಪಿಯ ಬಳಿ ಬರೆಯಿಸಿ ನೀಡಿರುತ್ತಾರೆ. ನಿಪಿ-1 ನ್ನು ನೀಡಿದ ನಿಖರವಾದ ದಿನಾಂಕ ಮತ್ತು ವರ್ಷ ನೆನಪಿರುವುದಿಲ್ಲ ಹಾಗೂ ಮುಟ್ಟುಗೋಲು ಆದ 1 ತಿಂಗಳ ನಂತರ ನೀಡಿರುತ್ತಾರೆ. ನಿಪಿ-1 ನ್ನು ಆರೋಪಿಯ ತಂದೆ ನನಗೆ ನೀಡಿದಾಗ ಆರೋಪಿಯ ತಂದೆ, ತಾಯಿ, ಆರೋಪಿ ಹಾಗೂ ನನ್ನ ಸ್ನೇಹಿತ ಹಾಜರಿದ್ದರು. ನಿಪಿ-1 ನ್ನು ಆರೋಪಿಯ ಮನೆಯಲ್ಲಿ ನೀಡಿರುತ್ತಾರೆ.

ನಿಪಿ-1 ಕರೂರು ವೈಶ್ಯ ಬ್ಯಾಂಕ್ ಚೆಕ್ ಆಗಿರುತ್ತದೆ. ಬರೆದಿದ್ದ ಚೆಕ್‌ನ್ನು ನನಗೆ ನೀಡಿರುತ್ತಾರೆ. ದಿನಾಂಕ ಬರೆದಿರುವುದಿಲ್ಲ ಕೇವಲ ನನ್ನ ಹೆಸರು ಮತ್ತು ಮೊತ್ತವನ್ನು ಬರೆದಿದ್ದು, 6 ತಿಂಗಳ ನಂತರ ನಗದೀಕರಿಸಲು ನೀಡಿ ಎಂದು ಹೇಳಿರುತ್ತಾರೆ. ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ಸಹಿ ಒಂದು ರೀತಿಯ ಶಾಹಿಯಲ್ಲಿ ಇದ್ದು ಬಾಕಿ ಉಳಿದ ವಿಷಯಗಳನ್ನು ಬೇರೆ ಶಾಹಿಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ಪೋಲೀಸ್ ಠಾಣೆಯಲ್ಲಿ ಮನೆ ಮುಟ್ಟುಗೋಲು ಆದ ಕಾರಣಕ್ಕೆ ದೂರು ನೀಡಿದ ಆಧಾರದ ಮೇಲೆ ಪೋಲೀಸರು ಒತ್ತಾಯ ಪೂರ್ವಕವಾಗಿ ಆರೋಪಿಯ ಕಡೆಯಿಂದ ಸಹಿ ಮಾಡದೇ ಇರುವ ನಿಪಿ-1 ನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬರೆಯಿಸಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 2015 ರಲ್ಲಿ ನನ್ನ ಬಳಿ ರೂ. 2,70,000/- ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನನಗೂ ಮತ್ತು ಆರೋಪಿಗೂ ಯಾವುದೇ ಭೋಗ್ಯದ ವ್ಯವಹಾರ ನಡೆದಿರುವುದಿಲ್ಲ ಹೊರತಾಗಿ ಆರೋಪಿಯ ತಂದೆಯ ಜೊತೆ

ನಡೆದಿದ್ದು, ಪೋಲೀಸ್ ಠಾಣೆಯಲ್ಲಿ ಆರೋಪಿಯ ಕಡೆಯಿಂದ ಒತ್ತಾಯಪೂರ್ವಕವಾಗಿ ನಿಪಿ-1 ನ್ನು ಕೊಡೆಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ರೂ. 2,70,000/-ಗಳನ್ನು ಕೊಡಲು ಭಾದ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಇಲ್ಲ**

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**